ಸೂಚಿಸಿದರೆ ಸಾಕೆಂದು ನಾನು ಬೇಡಿಕೊಂಡೆ. ಆದರೆ ಸ್ವಾಮಿಗಳನ್ನು ಕಾಣುವ ಕಾತುರ ಅವರಿಗೆ. ನಾವು ಮನೆಗೆ ಬಂದಾಗ ಸ್ವಾಮಿಗಳೊಬ್ಬರು ನನ್ನನ್ನು ಸ್ವಾಮಿ ಶಾರದಾನಂದರ ಕೊಠಡಿಗೆ ಹೋಗಬೇಡವೆಂದರು. ಕಾರಣ, ಡಾ. ಘೋಷರಿಗೆ ವಿಶ್ರಾಂತಿಗೆ ನಾನು ಅಡ್ಡಿಯುಂಟುಮಾಡಿದ್ದರಿಂದ ಸ್ವಾಮಿಗಳು ನನ್ನ ಮೇಲೆ ಕೋಪಗೊಂಡಿದ್ದರು. ನಾನು ಡಾ. ಘೋಷರ ಮನೆಗೆ ಹೋಗಿದ್ದುದನ್ನು ಸನ್ಯಾಲ್ ಮಹಾಶಯರು ಆಗಲೆ ಸ್ವಾಮಿಗಳಿಗೆ ವರದಿ ಮಾಡಿದ್ದರು! ಆದರೂ ನಾನು ಡಾ. ಘೋಷ್‌ರೊಂದಿಗೆ ಸ್ವಾಮಿಗಳ ಕೊಠಡಿಗೆ ಹೋದೆ. ನನ್ನನ್ನು ನೋಡಿದ ಕೂಡಲೆ ರೇಗುವ ದನಿಯಲ್ಲಿ ತಮ್ಮ ಜ್ವರದ ಬಗ್ಗೆ ತೋರಿದ ಅನವಶ್ಯಕ ಕಾಳಜಿಗಾಗಿ ನನ್ನನ್ನು ಕಠೋರವಾಗಿ ಬೈದರು. ಮತ್ತೊಮ್ಮೆ ನಾನು ಹೀಗೆ ಮೂರ್ಖನಂತೆ ವರ್ತಿಸಿದರೆ ಅವರು ನನ್ನನ್ನು ಎಂದಿಗೂ ತಮ್ಮ ಹತ್ತಿರ ಇರುವುದಕ್ಕೆ ಬಿಡುವುದಿಲ್ಲವೆಂದು ಹೇಳಿದರು.

ಆಗಾಗ್ಗೆ ನಾನು ಹೀಗೆ ಸ್ವಾಮಿಗಳಿಂದ ಬೈಸಿಕೊಳ್ಳುತ್ತಿದ್ದೆ. ಆಗ ಅದು, ಅನೇಕ ವೇಳೆ, ವಿನಾ ಕಾರಣವೆಂದು ಯೋಚಿಸುತ್ತಿದ್ದೆ, ಅದನ್ನು ಮಾನಸಿಕವಾಗಿ ವಿರೋಧಿಸುತ್ತಲೂ ಇದ್ದೆ. ಆದರೆ, ನಲವತ್ತು ವರ್ಷಗಳ ನಂತರ ಅವುಗಳಲ್ಲಿ ಕೆಲವನ್ನು ಜ್ಞಾಪಿಸಿಕೊಂಡಾಗ, ಅವು ನಿಜವಾಗಿ ಗುಪ್ತ ಆಶೀರ್ವಾದಗಳು ಎಂದು ನನಗೆ ಮನವರಿಕೆಯಾಗುತ್ತಿದೆ. ನನಗೆ ಇನ್ನೂ ಹೆಚ್ಚು ಹೆಚ್ಚಾಗಿ ಹಾಗೆ ಆಗಬೇಕಾಗಿತ್ತೆಂದು ಈಗ ಅನ್ನಿಸುವುದು. ಬಹುಶಃ ಸ್ವಾಮಿಗಳು ನನ್ನ ಅಹಂಕಾರವನ್ನು ಮುರಿಯಲು ಬಳಸಿದ ಮಾರ್ಗ ಅದಾಗಿರಬಹುದು.

(ಮುಂದುವರಿಯುವುದು)

## ಮನನ–ಮಾನ್ಯ

### ವಿಚಿತ್ರ ಮಾನವ ಸ್ವಭಾವ

–ಮಧುಪ

ಮೂರು ಬಗೆಯ ಜನರಿರುತ್ತಾರೆ. **ಸತ್ಯಂ ವದ ಧರ್ಮಂ ಚರ** ಎಂದು ಪ್ರಮಾಣ ವಚನ ಮಾಡಿದವರು, ನ್ಯಾಯ–ಧರ್ಮ ಎಂಬ ತತ್ತ್ವಗಳನ್ನು ಎಂದೂ ಕೈಬಿಡದವರು ಒಂದು ಬಗೆ. ಈ ನೀತಿ ನಿಯಮಗಳು ಎಲ್ಲರಿಗೂ (ತಮ್ಮನ್ನೂ ಸೇರಿಸಿಕೊಂಡು) ಅನ್ವಯವಾಗುವುದೆಂದು ಹೇಳುವ ಖಂಡಿತವಾದಿಗಳು. ಅವರು ನ್ಯಾಯ ನಿಷ್ಠುರರು, ದಾಕ್ಷಿಣ್ಯಪರರಲ್ಲ. ಯಾವ ಕೆಲಸ ಮಾಡಲಿ, ಯಾವ ಮಾತು ಆಡಲಿ, ಯಾವ ಆಲೋಚನೆಯೇ ಬರಲಿ, ಇದು ಸರಿಯೇ, ನ್ಯಾಯವೇ, ಧರ್ಮಯುಕ್ತವೇ ಎಂದು ಮೊದಲೇ ಪರಿಶೀಲನೆ ಮಾಡುವರು. ತಮಗೆ ಅದರಿಂದ ಕಷ್ಟವಾಗಲಿ, ನಷ್ಟವಾಗಲಿ– ನ್ಯಾಯವೆಂದು ತಮಗೆ ಖಚಿತವಾದ ತತ್ತ್ವಗಳಿಗೆ ತಲೆಬಾಗುವರು.

ಎರಡನೆಯ ಬಗೆ ಇನ್ನೊಂದು ತುದಿ. ಅವರಿಗೆ ಯಾವ ನೀತಿ ತತ್ತ್ವಗಳೂ ಬೇಡ. ತಮಗೆ ಅನುಕೂಲವಾದದ್ದು, ಲಾಭಕರವಾದದ್ದು ಆದರೆ ಆಯಿತು. ಅದೇ ಅವರ ಗುರಿ. ಗುರಿಸಾಧನೆಗೆ ಮಾರ್ಗ ಯಾವುದಾದರೂ ಸರಿ. ವಕ್ರವೊ, ಕುಟಿಲವೊ– ಒಟ್ಟಿನಲ್ಲಿ ಕಾರ್ಯಸಾಧನೆ ಆಗಲೇಬೇಕು. ತಾವು ತತ್ತ್ವನಿಷ್ಠರೆಂದು ಸೋಗೂ ಹಾಕುವುದಿಲ್ಲ, ಅವರು. ಸರಿಯೊ ತಪ್ಪೊ, ನ್ಯಾಯವೊ ಅನ್ಯಾಯವೊ, ನಿಯಮಕ್ಕನುಗುಣವೊ ವಿರೋಧವೊ– ಅದೊಂದೂ ನಮಗೆ ಗೊತ್ತಿಲ್ಲ. ಗೊತ್ತಾಗುವುದೂ ಬೇಡ. ಅದನ್ನೆಲ್ಲ ಕಟ್ಟಿಕೊಂಡು ನಮಗೇನಾಗಬೇಕು. ನೋಡಿ ಇದು ನಮ್ಮ ಇಷ್ಟ. ಇದು ಈಡೇರಬೇಕು.

ಇನ್ನು ಮೂರನೇ ಬಗೆಯ ಜನ ತಾವು ತುಂಬಾ ಬುದ್ಧಿವಂತರು, ಜಾಣರು, ಎಂದುಕೊಂಡು ಹಾಗೆಯೇ ಮಾತಾಡುತ್ತಾರೆ– ದೊಡ್ಡ ದೊಡ್ಡ ತತ್ತ್ವಗಳನ್ನು ಹೇಳುತ್ತಾರೆ. ಆದರೆ ಅವರದು ಯಾವಾಗಲೂ ಎರಡು ಮಾನದಂಡ, ದ್ವಿಮುಖ ನೀತಿ. ತಮಗೇ ಒಂದು, ಇತರರಿಗೆ ಇನ್ನೊಂದು. ಸಮಯ ನೋಡಿ ತಕ್ಕುದನ್ನು ಅನ್ವಯಿಸುತ್ತಾರೆ. ತಮಗೆ ಅನುಕೂಲವಾದುದು, ಲಾಭಕರವಾದುದು ಯಾವುದೋ ಅದನ್ನೇ ತಾತ್ತ್ವಿಕವಾಗಿ ಸಮರ್ಥನೆ ಮಾಡುತ್ತಾರೆ. ತಾವೆಂದೂ ನ್ಯಾಯ–ನೀತಿ ಬಿಟ್ಟು ಕದಲುವವರಲ್ಲ ಎಂದು ಸತ್ಯದ ತಲೆ ಮೇಲೆ ಹೊಡೆದ ಹಾಗೆ ಹೇಳುತ್ತಾರೆ.

ರೈಲಿನಲ್ಲಿ ತುಂಬಾ ಜನರಿದ್ದು ಗಾಡಿಯ ಒಳಗಿರುವ ಜನ ಬಾಗಿಲನ್ನು ಒಳಗಿಂದ ಭದ್ರಪಡಿಸಿ, ಯಾರು ಹತ್ತಲಿಕ್ಕೂ ಬಿಡದೆ ಹಟಹಿಡಿದಾಗ, ಈ ಜನ ಹತ್ತುವ ಪ್ರಯತ್ನದಲ್ಲಿರುವವರು. ಆಗ ಅವರು ಬೋಧಿಸುವ ಧರ್ಮ ಶ್ರೇಷ್ಠ ಮಾನವೀಯ ಮೌಲ್ಯಗಳಿಂದ ತುಂಬಿರುತ್ತದೆ. ಅದು ಹೇಗೊ ಅಂತು ಅವರು ಬಾಗಿಲು ತೆರೆಸಿ ಒಳಗೆ ಸೇರಿಕೊಂಡರು ಅನ್ನಿ. ಅಲ್ಲಿಂದ ಮುಂದಿನ ಸ್ಟೇಷನ್ನುಗಳಲ್ಲಿ ಗಾಡಿಯನ್ನು ಹತ್ತಲು ಯತ್ನಿಸುವ ಜನರು ಎಷ್ಟು ಗೋಗರೆಯಲಿ, ಕಾಡಲಿ, ಬೇಡಲಿ, ಇವರು ಆಗಲೆ ತಮ್ಮ ಸ್ಥಳಗಳನ್ನು ಚಾಕಚಕ್ಯತೆಯಿಂದ ಭದ್ರಪಡಿಸಿಕೊಂಡವರು, ಜಪ್ಪಯ್ಯಾ ಅಂದರೂ ಬಾಗಿಲು ತೆರೆಯುವುದಿಲ್ಲ. ಆಗ ಅವರ ಬಾಯಿಂದ ಬರುವ ಆಣಿಮುತ್ತುಗಳೇ ಬೇರೆ. ಮುಂದಿನ ಸ್ಟೇಷನ್ ಇನ್ನೇನು ಸಮೀಪಿಸುತ್ತಿದೆ ಎಂದಾಗಲೇ ಇವರು ಮುನ್ನೆಚ್ಚರಿಕೆ ವಹಿಸಿ ಬಾಗಿಲಿನ ಒಳಬಿರಡೆ ಬಿಗಿಯುತ್ತಾರೆ. ಸ್ಟೇಷನ್ ಕಡೆಯ ಕಿಟಕಿಗಳನ್ನೆಲ್ಲ ಮುಚ್ಚಿಸುತ್ತಾರೆ. ತಮ್ಮ ಈ ರೀತಿಗಳನ್ನೆಲ್ಲ ನ್ಯಾಯವಾದುದು ಎಂಬುದನ್ನು ಸಮರ್ಥಿಸಿ, ವಾದಿಸಿ ಸಾಧಿಸುತ್ತಾರೆ.